## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 968 / 2021

**ಚಾಸಾ-12 / ಪ್ರಾಸಾ-8**

| | |
|---|---|
| ಹೆಸರು | **ಟಿ. ಪ್ರದೀಪ್** |
| ತಂದೆಯ ಹೆಸರು | **ಜಿ.ಹೆಚ್ ತಿಮ್ಮಯ್ಯ** |
| ವಯಸ್ಸು | **46** |
| ಉದ್ಯೋಗ | **ಬಿ.ಎಂ.ಆರ್.ಡಿ. ಜಾಯಿಂಟ್ ಮೆಟ್ರೊಪಾಲಿಟನ್ ಕಮಿಷನರ್** |
| ವಿಳಾಸ | **ಬೆಂಗಳೂರು** |

ದಿನಾಂಕಃ **13-05-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಜುಲೈ-2019 ರಿಂದ ಜೂನ್-2022 ರವರೆಗೆ ಮಾಗಡಿ ತಾಲ್ಲೂಕು ಪಂಚಾಯ್ತಿಯಲ್ಲಿ ಇ.ಓ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತಹ ಮಾಗಡಿ ಪೋಲಿಸ್ ಠಾಣೆಯವರು ನನಗೆ ಒಂದು ಅರ್ಜಿ ಕೊಟ್ಟಿದ್ದು, ಸದರಿ ಅರ್ಜಿಯ ಸಾರಾಂಶದ ಕಲ್ಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನಪಾಳ್ಯದ ರಸ್ತೆ ಅಬಿವೃದ್ಧಿ ಕಾರ್ಯಕ್ರಮದ ಗುದ್ದಲಿ ಪೂಜಯ ಬಗ್ಗೆ ವರದಿ ನೀಡಲು ಕೇಳಿದ್ದು, ಅದರಂತೆ ಸ್ಥಳೀಯ ಕಲ್ಯಾ ಗ್ರಾಮ ಪಂಚಾಯಿತಿಯ ಪಿಡಿಓ

ರವರಿಗೆ ಅರ್ಜಿ ಸಲ್ಲಿಸಿ ವರದಿ ನೀಡುವಂತೆ ಕೇಳಿಕೊಂಡಿರುತ್ತೇನೆ. ಅದರಂತೆ ಪಿಡಿಓ ರವರು ಸದರಿ ಕಾರ್ಯಕ್ರಮವು ಸರ್ಕಾರಿ ಕಾರ್ಯಕ್ರಮ ಆಗಿರುತ್ತದೆ ಹಾಗೂ ಶಾಸಕರು ಬಂದಿದ್ದರು ಎಂದು ವರದಿಯನ್ನು ಕೊಟ್ಟಿದ್ದರು. ಸದರಿ ವರದಿಯನ್ನು ನಾನು ಮಾಗಡಿ ಪೋಲಿಸ್ ಠಾಣೆಯವರಿಗೆ ಸಲ್ಲಿಸಿರುತ್ತೇನೆ. ಈಗ ಸಾಕ್ಷಿಗೆ ನಿಪಿ-4 ನ್ನು ತೋರಿಸಲಾಗಿ, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು** :- ಶ್ರೀ. **ಆರ್.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ಮಾಗಡಿ ಪೋಲಿಸರು ವರದಿ ನೀಡುವಂತೆ ನಿಮಗೆ ಯಾವುದೇ ಅರ್ಜಿ ಕೊಟ್ಟಿದ್ದಿರಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಮಾಗಡಿ ಪೋಲಿಸರು ಈ ಪ್ರಕರಣದಲ್ಲಿ ನಿಮ್ಮ ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-4 ರಲ್ಲಿ ನೀಡಿದ ವರದಿಯ ಬಗ್ಗೆ ನಿಮಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ, ಸದರಿ ಕಲ್ಯಾ ಗ್ರಾಮ ಪಂಚಾಯಿತಿ ಪಿಡಿಓ ರವರ ಮಾಹಿತಿ ಮೇರೆಗೆ ವರದಿ ನೀಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಕೆಲಸ ಮಾಡುತ್ತಿದ್ದಂತಹ ಅವಧಿಯಲ್ಲಿ ಸದರಿ ಕಲ್ಯಾ ಗ್ರಾಮ ಪಂಚಾಯಿತಿ ಹಾಗೂ ಸದರಿ ಗ್ರಾಮ ಪಂಚಾಯಿತಿಯ ಉದ್ಯೋಗಿಗಳು ನಿಮ್ಮ ಕೈ ಕೆಳಗೆ ಬರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಕಲ್ಯಾ ಗ್ರಾಮಪಂಚಾಯಿತಿಯ ಪಿಡಿಓ ರವರು ತಮ್ಮ ವರದಿಯಲ್ಲಿ ಗ್ರಾಮ ಪಂಚಾಯ್ತಿ ಅನುಷ್ಠಾನಿತ ಕಾಮಗಾರಿ ಅಲ್ಲವಾದುದದರಿಂದ ಈ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಅನುಮತಿ ನೀಡಲಾಗಿರುವುದಿಲ್ಲ ಎಂದು ವರದಿಯನ್ನು ಸಹ ನೀಡಿರುತ್ತಾರೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಗ್ರಾಮ ಪಂಚಾಯಿತಿಯ ಪಿಡಿಓ ರವರು ಕಾರ್ಯಕ್ರಮಕ್ಕೆ ಹಾಜರಾಗಿದ್ದ ಬಗ್ಗೆ ನೀವು ಬರವಣಿಗೆಯಲ್ಲಿ ಅವರಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಅದರಂತೆ ನೀವು ನಿಮ್ಮ ವರದಿಯಲ್ಲಿ ಕಲ್ಯಾ ಗ್ರಾಮ ಪಂಚಾಯಿತಿಯವರ ಅಡಕದಂತೆ ಎಂದು ವರದಿ ನೀಡಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಸದರಿ ವಿಷಯವನ್ನು ಇಲ್ಲಿಯೇ ಪ್ರಥಮ ಬಾರಿಗೆ ಹೇಳುತ್ತಿರುವುದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ರಾಜಕೀಯ ಒತ್ತಡಕ್ಕೆ ಮಣಿದು ಸದರಿ ವರದಿಯನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.